ಭಗವದ್ಗೀತೆ ಸಾಧಿಸಿ ತೋರಿಸಿದೆ. ಮಹಾತ್ಮ ಗಾಂಧೀಜಿ ಸ್ವಾತಂತ್ರ್ಯ ಸಂಗ್ರಾಮದ ಅವಧಿಯಲ್ಲಿ ಭಗವದ್ಗೀತೆಗೆ 'ಅನಾಸಕ್ತಿ ಯೋಗ' ಎಂಬ ಹೆಸರಿನ ಭಾಷ್ಯ ಬರೆದದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಮಹಾಭಾರತವನ್ನೇ ಒಂದು ದೊಡ್ಡ ರೂಪಕವೆಂದವರಿದ್ದಾರೆ. ಅದೊಂದು ಸಂಕೇತ; ಅದು ಪಾಂಡವ ಕೌರವರ ಕತೆಯಲ್ಲ, ನಮ್ಮ ದಿನನಿತ್ಯದ ಕತೆ ಎಂದವರಿದ್ದಾರೆ. ಅವರ ಅಭಿಪ್ರಾಯದಂತೆ ಮಹಾಭಾರತದಲ್ಲಿ ಬರುವ ಧರ್ಮರಾಯ **ಧರ್ಮದ ಅಚಲವಾದ ಅನುಷ್ಠಾನ**ವನ್ನು ಸಂಕೇತಿಸುತ್ತಾನೆ. ಭೀಮನಾದರೋ **ಆತ್ಮಬಲ**ದ ಸಂಕೇತ. ಅರ್ಜುನನು **ಸಾಧನೆ**ಯ ಸಂಕೇತ. ನಕುಲ ಸಹದೇವರು **ಶೀಲ ಮತ್ತು ವಿನಯ**ದ ಸಂಕೇತ. ದ್ರೌಪದಿ **ವಿದ್ಯೆ**ಯ ಸಂಕೇತ. ವಿದ್ಯಾರ್ಥಿಗಳು ಶೀಲ, ವಿನಯ, ಸಾಧನೆ, ಆತ್ಮಬಲ ಮತ್ತು ಜೀವನಧರ್ಮದ ಬಗ್ಗೆ ನಿಷ್ಠೆಯನ್ನು ರೂಢಿಸಿಕೊಂಡರೆ ಶೈಕ್ಷಣಿಕ ಸಾಧನೆಗಳು ಸುಲಭಸಾಧ್ಯವಾಗುತ್ತವೆ ಎಂಬ ನೀತಿಯನ್ನು ಮಹಾಭಾರತವು ಸಾಂಕೇತಿಕವಾಗಿ ಹೇಳುತ್ತದೆ. ಹಾಗೆಯೇ ಈ ಮೌಲ್ಯಗಳು ಎಲ್ಲ ಕಾಲಕ್ಕೂ, ಎಲ್ಲರಿಗೂ ಅವಶ್ಯವಾಗಿ ಬೇಕಾದ ಸಾರ್ವತ್ರಿಕ ಮೌಲ್ಯಗಳು ಕೂಡ.

ಇದಕ್ಕೆ ಪೂರಕವಾಗಿ ತಮ್ಮ ಉಪನ್ಯಾಸವೊಂದರಲ್ಲಿ ಉಡುಪಿ ಪೇಜಾವರ ಮಠದ ಶ್ರೀಗಳಾದ ಪೂಜ್ಯ ವಿಶ್ವೇಶತೀರ್ಥ ಸ್ವಾಮೀಜಿಯವರು ಹೇಳಿದ ಮಾತೊಂದನ್ನು ಇಲ್ಲಿ ನೆನಪಿಸಿಕೊಳ್ಳಬಹುದು: "ಪಾಂಡವರು ಧರ್ಮದ, ನೀತಿಯ, ಪುಣ್ಯದ ಪ್ರತೀಕವಾದರೆ, ಕೌರವರು ಅಧರ್ಮದ, ಅನೀತಿಯ, ಪಾಪದ ಪ್ರತೀಕ. ಒಳ್ಳೆಯದಕ್ಕಿಂತ ಕೆಟ್ಟ ವಿಚಾರಗಳೇ ಜಾಸ್ತಿ ಇರುತ್ತವೆ. ಪಾಂಡವರಿಗಿಂತ ಕೌರವರ ಸಂಖ್ಯೆ ಜಾಸ್ತಿ. ಆದರೆ ಕಡೆಯಲ್ಲಿ ಕೆಟ್ಟ ವಿಚಾರಗಳ ಎದುರು ಒಳ್ಳೆಯ ವಿಚಾರಗಳೇ ಗೆಲ್ಲುತ್ತವೆ."

ಕುಂದಾಪುರ ಸೀಮೆಯ ಕನ್ನಡದಲ್ಲಿ ಒಂದು ನಾಣ್ಣುಡಿಯಿದೆ: "ಅಂತೂ ಇಂತೂ ಕುಂತಿ ಮಕ್ಕಳಿಗೆ ರಾಜ್ಯವಿಲ್ಲದೆ ಹೋಯ್ತು." ಕುರುಕ್ಷೇತ್ರ ಯುದ್ಧದ ನಂತರ ಹಸ್ತಿನಾಪುರದ ಅರಸೊತ್ತಿಗೆ ಸಿಕ್ಕಿತಲ್ಲ ಎಂದು ಪಾಂಡವರಿಗೆ ಅನ್ನಿಸಿತೆ? ಏನುಳಿದಿತ್ತು ಆಗ ಆ ರಾಜ್ಯದಲ್ಲಿ? ಬಂಧುಮಿತ್ರರ ಆಪ್ತರ ಶವಗಳ ರಾಶಿ. ವಿಧವೆಯರದೇ ರಾಜ್ಯ. ಮಕ್ಕಳನ್ನು, ಹೆತ್ತವರನ್ನು, ಒಡಹುಟ್ಟಿದವರನ್ನು ಕಳೆದುಕೊಂಡವರ ಗೋಳು. ರಕ್ತ, ಮಾಂಸದ ಆಸೆಯಿಂದ ಬಂದು ಬೀಡುಬಿಟ್ಟ ರಣಹದ್ದುಗಳ ರಾಜ್ಯ. ಹೆಜ್ಜೆಹೆಜ್ಜೆಗೆ ಕಾಡುವ ಪಾಪಪ್ರಜ್ಞೆ. ಪಾಂಡವರು ಇದನ್ನು ಬಯಸಿದ್ದರೆ? ನೆತ್ತರಿನ ಹೊಳೆಯಲ್ಲಿ ಗಾಳ ಎಸೆದವರಿಗೆ ಸಿಗುವುದಾದರೂ ಏನು? ಭೂಮಿ, ಹೊನ್ನು, ಹೆಣ್ಣಿಗಾಗಿ ನಡೆವ ಹೋರಾಟದಲ್ಲಿ ಸಿಗುವ ಗೆಲುವಿಗೆ ಅರ್ಥವೇ ಇಲ್ಲ ಎಂಬ ಕ್ರೂರಪಾಠವನ್ನು ಹೇಳುತ್ತದೆಯೆ, ಮಹಾಭಾರತ? ⌘

## ಶ್ರೀರಾಮಕೃಷ್ಣ ಶಾರದಾಶ್ರಮ

ಪೊನ್ನಂಪೇಟೆ –571 116, ಕೊಡಗು ಜಿಲ್ಲೆ ಫೋನ್: 08274–249040
e-mail: srkseva@gmail.com • Web: www.rkmponnampet.org.

### ಆಧ್ಯಾತ್ಮಿಕ ಶಿಬಿರ: 26–10–2012 ರಿಂದ 28–10–2012

ಆತ್ಮೀಯ ಭಕ್ತರೇ,

ಸ್ವಾಮಿ ವಿವೇಕಾನಂದರ 150ನೇ ಜಯಂತ್ಯುತ್ಸವದ ಆಚರಣೆಯ ಅಂಗವಾಗಿ ಮತ್ತು ಪೊನ್ನಂಪೇಟೆಯಲ್ಲಿ ನಿರ್ಮಾಣವಾಗಿರುವ ಶ್ರೀರಾಮಕೃಷ್ಣ ವಿಶ್ವಭಾವೈಕ್ಯ ಮಂದಿರದ ಮೂರನೇ ವಾರ್ಷಿಕೋತ್ಸವದ ಪ್ರಯುಕ್ತ, 2012, ಅಕ್ಟೋಬರ್ 26 ರಿಂದ 28 ರವರೆಗೆ 3 ದಿನಗಳ ಆಧ್ಯಾತ್ಮಿಕ ಶಿಬಿರವನ್ನು ಆಯೋಜಿಸಲಾಗಿದೆ. ರಾಮಕೃಷ್ಣ ಮಠದ ಹಿರಿಯ ಯತಿಗಳಾದ ಸ್ವಾಮಿ ಗೌತಮಾನಂದಜಿ, ಸ್ವಾಮಿ ಹರ್ಷಾನಂದಜಿ, ಸ್ವಾಮಿ ಜಗದಾತ್ಮಾನಂದಜಿ, ಸ್ವಾಮಿ ರಾಘವೇಶಾನಂದಜಿ, ಸ್ವಾಮಿ ಮುಕ್ತಿದಾನಂದಜಿ ಮತ್ತು ಶ್ರೀ ಸಿದ್ಧೇಶ್ವರ ಸ್ವಾಮೀಜಿ, ಜ್ಞಾನಯೋಗಾಶ್ರಮ, ಬಿಜಾಪುರ ಮುಂತಾದವರು ಈ ಕಾರ್ಯಕ್ರಮವನ್ನು ನಡೆಸಿಕೊಡಲು ಮತ್ತು ಮಾರ್ಗದರ್ಶನ ನೀಡಲು ಒಪ್ಪಿರುತ್ತಾರೆ. ಸ್ವಾಮಿ ದಿವ್ಯವ್ರತಾನಂದಜಿ, ಶ್ರೀ ಚಕ್ರವರ್ತಿ ಸೂಲಿಬೆಲೆ ಹಾಗೂ ಇತರರು ಸಾಂಸ್ಕೃತಿಕ ಕಾರ್ಯಕ್ರಮವನ್ನು ನಡೆಸಿಕೊಡಲಿದ್ದಾರೆ. ಶಿಬಿರದ ನೋಂದಣಿ ಶುಲ್ಕ – ವಸತಿ ರಹಿತ: ರೂ. 300/– ವಸತಿ ಸಹಿತ: ರೂ. 600/– ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ 30.09.2012. ಈ ಸಂದರ್ಭದಲ್ಲಿ 2012, ಅಕ್ಟೋಬರ್ 26ರಂದು ಪರಮಪೂಜ್ಯ ಶ್ರೀಮತ್ ಸ್ವಾಮಿ ಗೌತಮಾನಂದಜಿಯವರು ಮಂತ್ರದೀಕ್ಷೆ ನೀಡಲಿದ್ದಾರೆ.

ದೇವಸ್ಥಾನಗಳ ಅರ್ಚಕರು ಮತ್ತು ಆಡಳಿತಗಾರರ ಸಮಾವೇಶವನ್ನು 2012, ಅಕ್ಟೋಬರ್ 29ರಂದು ಬೆಳಗ್ಗೆ 9.00ರಿಂದ ಸಂಜೆ 6.00ರವರೆಗೆ ಆಯೋಜಿಸಲಾಗಿದೆ. ಆಸಕ್ತಿಯುಳ್ಳವರು ಈ ಕಾರ್ಯಕ್ರಮದಲ್ಲಿಯೂ ಭಾಗವಹಿಸಬಹುದು.


ಭಕ್ತಾದಿಗಳು ಈ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ದಿವ್ಯತ್ರಯರ ಕೃಪೆಗೆ ಪಾತ್ರರಾಗಬೇಕೆಂದು ಕೋರಲಾಗಿದೆ.

ಭಗವತ್ಸೇವೆಯಲ್ಲಿ ತಮ್ಮವ
ಸ್ವಾಮಿ ಬೋಧಸ್ವರೂಪಾನಂದ
ಅಧ್ಯಕ್ಷರು

# ಭಗವಂತನನ್ನು ಸ್ಪರ್ಶಿಸಿದ ಸೋದರಿ ಲಲಿತಾ

ಪ್ರವ್ರಾಜಿಕಾ ಬ್ರಹ್ಮಪ್ರಾಣಾ

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)



**ಜೀವಂತ ಸಾನ್ನಿಧ್ಯ :** ಸೋದರಿ ಲಲಿತಾಗೆ ತಾವು ಭಗವಂತನನ್ನು ಸ್ಪರ್ಶಿಸಿರುವುದಾಗಿ ಗೊತ್ತಿತ್ತು. ಸ್ವಾಮಿ ವಿವೇಕಾನಂದರು ನಾಲ್ಕು ವಾರಗಳ ಕಾಲ ಅವರ ಕುಟುಂಬದ ಜೊತೆಗಿದ್ದರು. ಆಗ ಅವರೊಂದಿಗಿನ ಸಂಬಂಧಗಳು ಮತ್ತು ವೈಯಕ್ತಿಕ ಬೋಧನೆಗಳು ಸೋದರಿ ಲಲಿತಾರ ಅಂತರಂಗದ ಬದುಕನ್ನು ಬೆಳಗಿಸಿದುವು, ಹಾಗೆಯೇ ಅವರ ಕರ್ಮಯೋಗವನ್ನು ಎಚ್ಚರಬುದ್ಧಿ ಮತ್ತು ಆನಂದಗಳಿಂದ ತುಂಬಿದವು. "ಅವರು ಅಡುಗೆ ಮಾಡುತ್ತಿರುವಾಗ, ದ್ರಾಕ್ಷಿಹಣ್ಣಿನಿಂದ ಸಣ್ಣ ಬೀಜವನ್ನೂ ತೆಗೆಯುತ್ತಿದ್ದರು. ಕೆಲಸ ಮಾಡುವಾಗ ಅವರು ಹೆಚ್ಚಿನವರಂತೆ ಅವಸರಿಸುತ್ತಿರಲಿಲ್ಲ, ವಸ್ತುಗಳನ್ನು ಬೀಳಿಸುತ್ತಿರಲಿಲ್ಲ. ಕೆಲವೊಮ್ಮೆ ನೈವೇದ್ಯಕ್ಕಾಗಿ ಅಡುಗೆ ತಯಾರಿಸುವಲ್ಲಿ ನಮಗೆ ತಡವಾಗುತ್ತಿತ್ತು. ಅದು ಸಮಯಕ್ಕೆ ಸರಿಯಾಗಿ ಸಿದ್ಧವಾಗುವುದಿಲ್ಲವೆಂದು ನಾವು ಭಾವಿಸುತ್ತಿದ್ದೆವು. ಆದರೂ, ಲಲಿತಾ ಆತುರಪಡುತ್ತಿರಲಿಲ್ಲ. ಆಶ್ಚರ್ಯವೆಂದರೆ, ಎಲ್ಲವೂ ಸಮಯಕ್ಕೆ ಸರಿಯಾಗಿ ಆಗುತ್ತಿತ್ತು" ಎಂದು ಒಬ್ಬ ಆಶ್ರಮವಾಸಿಗಳು ಅವರ ಬಗ್ಗೆ ಬರೆಯುತ್ತಾರೆ.

ಸೋದರಿ ಲಲಿತಾ ವಿವೇಕಾನಂದರೊಂದಿಗಿನ ತಮ್ಮ ದಿನಗಳನ್ನು ನೆನಪಿಸಿಕೊಳ್ಳಲು ಬಹಳ ಇಷ್ಟಪಡುತ್ತಿದ್ದರು. ಅವರು ಸ್ವಭಾವತಃ ಸಂಕೋಚ ಸ್ವಭಾವದವರಾದರೂ, ಆ ಸಂದರ್ಭಗಳಲ್ಲಿ ತುಂಬ ಚುರುಕಾಗುತ್ತಿದ್ದರು. ಲಲಿತಾ ಅವರ ಪಾಲಿಗೆ ಸ್ವಾಮೀಜಿ ಜೀವಂತವಾಗಿದ್ದರು. ಸ್ವಾಮೀಜಿಯವರೊಂದಿಗಿನ ಅವರ ಆರಂಭಿಕ ಸಂಬಂಧವು ಕೇವಲ ಔಪಚಾರಿಕ ಸಂಬಂಧವಾಗಿರಲಿಲ್ಲ; ಅದೊಂದು ಆತ್ಮೀಯ ಬಾಂಧವ್ಯವಾಗಿತ್ತು. "ಸ್ವಾಮೀಜಿ ನನಗೆ ಸೋದರನಂತಿದ್ದರು" ಎನ್ನುತ್ತಾರೆ ಸೋದರಿ. ಸ್ವಾಮೀಜಿಯವರೊಂದಿಗೆ ವಾಸಿಸುವುದೆಂದರೆ ಅದು ಹೇಗಿತ್ತು ಎಂದು ಕೇಳಿದಾಗ ಲಲಿತಾ ಹೀಗೆ ಉತ್ತರಿಸಿದರು: "ಅವರು ನಮ್ಮ ಪ್ರಜ್ಞೆಯನ್ನು ಮೇಲ್‌ಸ್ತರಕ್ಕೇರಿಸುತ್ತಿದ್ದರು. ಆದ್ದರಿಂದ ನಾವು ಅವರೊಂದಿಗಿರುವಾಗ ಪ್ರೇಮ ಮತ್ತು ಆನಂದದ ಹೊರತಾಗಿ ಮತ್ತೇನನ್ನೂ ಭಾವಿಸಲು ಸಾಧ್ಯವಾಗುತ್ತಿರಲಿಲ್ಲ. ಅವರು ಅಷ್ಟು ವಿನೋದಶೀಲರಾಗಿದ್ದರು!" ಆದರೆ ಸ್ವಾಮೀಜಿಯವರೊಂದಿಗಿನ ಲಲಿತಾರ ಸಂಬಂಧವು ಎಷ್ಟೇ ಆತ್ಮೀಯ ಅಥವಾ ಅನೌಪಚಾರಿಕವಾಗಿರಲಿ, ಆಕೆ ಮತ್ತು ಆಕೆಯ ಸೋದರಿಯರು 'ಕ್ರಿಸ್ತನೇ ತಮ್ಮೊಂದಿಗೆ ಇದ್ದಾನೆ' ಎಂದು ಅಕಸ್ಮಾತ್ತಾಗಿ ಮನಗಂಡು ಬೆರಗಾದ ಕ್ಷಣಗಳು ಇದ್ದೇ ಇರುತ್ತಿದ್ದವು.

ಸ್ವಾಮೀಜಿಯವರ ಕೋಣೆ ಮೇಲಿನ ಮಹಡಿಯಲ್ಲಿತ್ತು. ಈ ಮನೆಯು ಅವರಿಗೆ ತಂಗಲು ಬಹಳ ಅನುಕೂಲವಾಗಿತ್ತು. ಪ್ರತಿದಿನ ಬೆಳಗ್ಗೆ ಉಪಾಹಾರಕ್ಕಾಗಿ ಸ್ವಾಮೀಜಿ ಕೆಳಗಿಳಿದು ಬರುತ್ತಿದ್ದರು. ಆಗ ಸ್ನಾನದಿಂದ ಅವರ ಕೂದಲು ಒದ್ದೆಯಾಗಿ, ಕೆದರಿರುತ್ತಿತ್ತು. ಬಿಳಿ ಮತ್ತು ಕಪ್ಪು ಬಣ್ಣದ ಟ್ವೀಡ್ (ಒಂದು ಬಗೆಯ ಉಣ್ಣೆ) ಬಟ್ಟೆಯನ್ನು ಅವರು ಆಗ ಧರಿಸಿರುತ್ತಿದ್ದರು. ಉಪಾಹಾರಕ್ಕೆ ಮೊದಲು ಅವರು ಮನೆಯ ಹಿಂದಿನ ಹೂದೋಟದಲ್ಲಿ ಅಥವಾ ಮನೆಯ ಪಕ್ಕದ ರಸ್ತೆಯಲ್ಲಿ ವಾಯುವಿಹಾರವನ್ನು ಮಾಡುತ್ತಿದ್ದರು. ಕೆಲವೊಮ್ಮೆ ತಮ್ಮದೇ ವಿಚಾರಗಳಲ್ಲಿ ತಲ್ಲೀನರಾಗಿ, ಕೆಲವೊಮ್ಮೆ ಗಟ್ಟಿಯಾಗಿ ಹಾಡುತ್ತ ಅಥವಾ ಸ್ತೋತ್ರಪಠಣ ಮಾಡುತ್ತ ಸೋದರಿ ತಯಾರಿಸಿದ ಉಪಾಹಾರವನ್ನು ನಿಧಾನವಾಗಿ ತೆಗೆದುಕೊಳ್ಳುತ್ತಿದ್ದರು. ಪಸಾಡೆನದಲ್ಲಿ ಬೆಳಗ್ಗೆ ೧೦ ಗಂಟೆಯ ತರಗತಿಯಿಲ್ಲದಿದ್ದರೆ, ಸ್ವಾಮೀಜಿ ಮಕ್ಕಳೊಂದಿಗೆ ಆಟವಾಡುತ್ತಿದ್ದರು, ಪುಸ್ತಕ ಓದುತ್ತಿದ್ದರು ಅಥವಾ ತೋಟದಲ್ಲಿ ಸುತ್ತಾಡುತ್ತಿದ್ದರು. ಹಾಗೆಯೇ ಸ್ವಾಮೀಜಿ ಮಧ್ಯಾಹ್ನದ ಎಲ್ಲ ಊಟಗಳಿಗೆ ಹಾಜರಿದ್ದು, ಕೆಲವೊಮ್ಮೆ ಬೆಳಗಿನ ತರಗತಿಗಳಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳನ್ನು, ಉದಾಹರಣೆಗೆ ಮಿಸ್ ಜೊಸೆಫಿನ್ ಮತ್ತು ಅವಳ ಅಕ್ಕ ಶ್ರೀಮತಿ ಫ್ರಾನ್ಸಿಸ್ ಲೆಗೆಟ್‌ರನ್ನು ಊಟಕ್ಕೆ ಕರೆಯುತ್ತಿದ್ದರು. ಊಟದ ಹೊತ್ತಿನ ಮಾತುಕತೆಗಳು – ಭಾರತದ ಕುರಿತು ಅಥವಾ ಯಾವುದೇ ಆಧ್ಯಾತ್ಮಿಕ ವಿಷಯದ ಕುರಿತಾಗಿ – ಯಾವಾಗಲೂ ಸ್ವಾರಸ್ಯಕರವಾಗಿರುತ್ತಿದ್ದುವು. ಆ ಭೋಜನಗಳಲ್ಲಿ ಶ್ರೀಮತಿ ಹ್ಯಾನ್ಸ್‌ಬ್ರೋ ಹೇಳುವಂತೆ, "ಆಧ್ಯಾತ್ಮಿಕತೆಯಿಂದ ಸುತ್ತಲ ಪರಿಸರವು ತುಂಬಿಹೋಗಿತ್ತು." ಇಂತಹದೊಂದು ಸಂದರ್ಭದಲ್ಲಿ ಸ್ವಾಮೀಜಿಯವರು ಬೆಳಗ್ಗೆ ೧೦ ರಿಂದ ಸಾಯಂಕಾಲ ೪ ರವರೆಗೆ ತಡೆಯಿಲ್ಲದೆ ಮಾತನಾಡಿದರು. ಅವರು ಮಾತು ಮುಗಿಸಿದಾಗ ಶ್ರೀಮತಿ ಹ್ಯಾನ್ಸ್‌ಬ್ರೋ ನೆನಪಿಸಿಕೊಳ್ಳುತ್ತಾರೆ, "ಇಡೀ ವಾತಾವರಣವು ಆಧ್ಯಾತ್ಮಿಕ ಶಕ್ತಿಯಿಂದ ಓತಪ್ರೋತವಾಗಿತ್ತು."

ಸ್ವಾಮೀಜಿಯವರು ತಮ್ಮ ಬಿಡುವಿನ ಸಮಯವನ್ನು ಆಸ್ವಾದಿಸಿದ ಹಾಗೆ, ಸೋದರಿಯರು ಅವರ ಇನ್ನೂ ಕೆಲವು ಅಪೂರ್ವ ಕ್ಷಣಗಳನ್ನು ತಮ್ಮ ಹೃದಯದಲ್ಲಿ ಪ್ರೇಮದಿಂದ ಇಟ್ಟುಕೊಂಡಿದ್ದರು. ಉದಾಹರಣೆಗೆ, ಸ್ವಾಮೀಜಿ ಊಟವಾದ ಮೇಲೆ ಮಂಟಪದ ಮೇಲೆ ವಿಶ್ರಾಂತಿ ಪಡೆಯುತ್ತ ಶ್ರೀಮತಿ ವೈಕಾಫ್‌ಳನ್ನು ಕರೆದು ಹೇಳುತ್ತಿದ್ದರು, "ನೀನು ಅದೆಷ್ಟು ಕೆಲಸ ಮಾಡುತ್ತೀಯೆಂದರೆ ನಿನಗೆ ದಣಿವಾಗಿರಬಹುದು. ಜಗತ್ತಿನಲ್ಲಿ ಕೆಲವು ಮಾರ್ಥಾಗಳು ಇರಬೇಕಾಗುತ್ತದೆ. ನೀನು ಅಂತಹ ಒಬ್ಬ ಮಾರ್ಥಾ" (ಮಾರ್ಥಾ ಎನ್ನುವವಳು ಏಸುಕ್ರಿಸ್ತನ ಶಿಷ್ಯೆ,